(ಅನುಬಂಧ–1)

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಪಶುಸಂಗೋಪನೆ ಸಚಿವರು)(ಮಾನ್ಯ ಮುಖ್ಯಮಂತ್ರಿಯವರ ಪರವಾಗಿ): ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ 31ನೇ ಮಾರ್ಚ್ 2013ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ರಾಜಸ್ವ ವಿಭಾಗ ಮೇಲಿನ ವರದಿ ಮತ್ತು ಆರ್ಥಿಕ ವಲಯ ವರದಿಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು:– ಪ್ರಸ್ತಾವ ಮಂಡಿಸಲಾಗಿದೆ.

3. ಚುನಾವಣಾ ಪ್ರಸ್ತಾವ

ವಿಷಯ: ಕರ್ನಾಟಕ ಗ್ರಂಥಾಲಯ ಪ್ರಾದೇಕಾರಕ್ಕೆ ವಿಧಾನಸಭಾ ಸದಸ್ಯರನ್ನು ಚುನಾಯಿಸುವ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶುಸಂಗೋಪನೆ ಸಚಿವರು):– ಮಾನ್ಯ ಅಧ್ಯಕ್ಷರೆ,

1. 1965ರ ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ ಕಲಂ–3ರ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತದ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕರ್ನಾಟಕ ಗ್ರಂಥಾಲಯ ಪ್ರಾಧಿಕಾರಕ್ಕೆ ನಾಲ್ಕು ವಿಧಾನಸಭಾ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

2. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ ತರಲು ನಿಯಮಾವಳಿ ಸಮಿತಿ ರಚಿಸಲು ಪ್ರಸ್ತಾವವನ್ನು ಮಂಡನೆ ಮಾಡುತ್ತಿದ್ದೇನೆ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ಕೆಲವು ತಿದ್ದುಪಡಿಗಳನ್ನು ತರುವುದಕ್ಕೋಸ್ಕರ ಪ್ರಸ್ತಾವ ಮಂಡನೆಗೆ ತಮ್ಮ ಅನುಮತಿಯನ್ನು ಕೋರುತ್ತೇನೆ.

ಪ್ರಸ್ತಾವ ಏನೆಂದರೆ,

"ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳನ್ನು ಪರಿಶೀಲಿಸಿ ತಿದ್ದುಪಡಿ ತರಲು, ಸಲಹೆ ನೀಡುವುದಕ್ಕಾಗಿ ವಿಧಾನಸಭೆಯ ನಿಯಮಾವಳಿ ಸಮಿತಿಯನ್ನು ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ರಚಿಸಲು ಹಾಗೂ ಆ ಸಮಿತಿಗೆ ಮಾನ್ಯ ಸದಸ್ಯರುಗಳನ್ನು ನೇಮಕ ಮಾಡಲು ಸನ್ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರ ನೀಡಲು ಈ ಸದನವು ಒಪ್ಪಿಗೆ ನೀಡಬೇಕೆಂದು ಕೋರುತ್ತೇನೆ."

ಅಧ್ಯಕ್ಷರು:– ಮಾನ್ಯ ಸಚಿವರು ಮಂಡಿಸಿದ ಪ್ರಸ್ತಾವನೆಗೆ ಈ ಸದನವು ಒಪ್ಪಿಗೆ ನೀಡಿರುತ್ತದೆಂದು ಭಾವಿಸಲಾಗಿದೆ.

4. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ವಿಷಯ: ಅನುದಾನಿತ ಇಂಜಿನೀಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರುಗಳು ಮೃತಪಟ್ಟ ಸಂದರ್ಭದಲ್ಲಿ ಅನುಕಂಪದ ಆಧಾರದ ಮೇಲೆ ನೌಕರಿ ನೀಡುವ ಬಗ್ಗೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):– ಮಾನ್ಯ ಅಧ್ಯಕ್ಷರೆ, ಸರ್ಕಾರದಲ್ಲಿ Cadre and Recruitment Rulesನಲ್ಲಿ ಆಗಲಿ, ವಿಶೇಷ ಕಾನೂನುಗಳನ್ನು ರಚನೆ ಮಾಡುವ ಮೂಲಕ ಸೇವೆಯಲ್ಲಿ ನಿಧನ ಹೊಂದಿದವರ ಮಕ್ಕಳಿಗೆ ಅನುಕಂಪದ ಆಧಾರದ ಮೇಲೆ ಕೆಲಸವನ್ನು ಕೊಡುವಂಥ ಕಾನೂನು ಜಾರಿಯಲ್ಲಿದೆ. ಆದರೆ ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ಸೇವೆಯಲ್ಲಿ